**ಇಂದು ದಿನಾಂಕ 25.11.2025 ರಂದು ಡಿಡಬ್ಲ್ಯೂ -1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದಃ**

**2.** ವಾದಿಯ ಮದುವೆ 2000 ರಲ್ಲಿ ಆಗಿದೆ. ಅವರ ಮದುವೆಯನ್ನು ನನ್ನ ತಂದೆಯವರು ಮಾಡಿದ್ದಾರೆ. ನನ್ನ ಮದುವೆ 2006 ರಲ್ಲಿ ಆಗಿದೆ. ನನ್ನ ಮದುವೆಯನ್ನು ನನ್ನ ತಂದೆಯವರು ಮಾಡಿದ್ದಾರೆ. ಮದುವೆಯಾದಾಗಿನಿಂದ ನಾನು ಮತ್ತು ನನ್ನ ಅಕ್ಕ ಬೇರೆ ಬೇರೆ ವಾಸವಿದ್ದೇವೆ ಎಂದರೆ 2007 ರಿಂದ ನಾವು ಜೊತೆಯಲ್ಲಿ ಇಲ್ಲ ಎನ್ನುತ್ತಾರೆ. ನನ್ನ ಅಕ್ಕ ಮದುವೆಯಾದಾಗಿನಿಂದ ಗಂಡನ ಮನೆಯಲ್ಲಿ ಇದ್ದಾರೆ ಎಂದರೆ ನಿಜ. ಬೆಂಗಳೂರಿನಲ್ಲಿ ಇರುವ ಆಸ್ತಿಗಳನ್ನು ಖರೀದಿ ಮಾಡುವ ಹೊತ್ತಿಗೆ ವಾದಿ ಮದುವೆಯಾಗಿ ಪ್ರತ್ಯೇಕವಾಗಿ ಗಂಡನ ಮನೆಯಲ್ಲಿ ಇದ್ದರು ಎಂದರೆ ನಿಜ. ನನ್ನ ಅಕ್ಕ ಮದುವೆಯಾದಾಗಿನಿಂದ ನನ್ನ ತಂದೆಯ ಜೊತೆಗೆ ಅನ್ಯೂನ್ಯತೆಯಿಂದ ಇರಲಿಲ್ಲ ಎಂದರೆ ನಿಜ. ಸದರಿ ದಾವೆಯಲ್ಲಿ ವಾದಿ ಬೆಂಗಳೂರಿನ ಆಸ್ತಿಗಳನ್ನು ಸೇರಿಸಬೇಕು ಎಂದು ಒಂದು ಅರ್ಜಿ ಹಾಕಿದ್ದರು ಎಂದರೆ ಗೊತ್ತಿಲ್ಲ. ಸದರಿ ಅರ್ಜಿ ವ್ಯಚ್ಚದೊಂದಿಗೆ ವಜಾ ಆಗಿದೆ ಎಂದರೆ ಗೊತ್ತಿಲ್ಲ. ಸದರಿ ಅರ್ಜಿ ವಜಾ ಆಗಿದ ನಂತರ ನಾನು ಮತ್ತು ನನ್ನ ಅಕ್ಕ ವಜಾ ಆದೇಶವನ್ನು ಪ್ರಶ್ನಿಸಿಲ್ಲ ಎಂದರೆ ನಿಜ. ಆದ ಕಾರಣ ನನ್ನ ಅಕ್ಕ ಈ ದಾವೆಯಲ್ಲಿ ಭಾಗ ಬೇಕು ಎಂದು ದಾವೆ ಸಲ್ಲಿಸುವಾಗ ಬೆಂಗಳೂರಿನ ಆಸ್ತಿಗಳನ್ನು ಸೇರಿಸಿರಲಿಲ್ಲ ಎಂದರೆ ನಿಜ. ಬೆಂಗಳೂರಿನ ಆಸ್ತಿಗಳಲ್ಲಿ ಸ್ವಾಧೀನದಲ್ಲಿದ್ದೇವೆ ಎಂದು ದಾವೆಯಲ್ಲಿ ಹೇಳಿಲ್ಲ ಎಂದರೆ ನಿಜ. ಮದುವೆಯಾದಾಗಿನಿಂದ ನಾನು ಪ್ರತ್ಯೇಕವಾಗಿ ವಾಸವಿದ್ದೇನೆ ಎಂದರೆ ನಿಜ. ದಾವೆ ಹಾಕಿದ ನಂತರ ಬೆಂಗಳೂರಿನ ಆಸ್ತಿಗಳನ್ನು ನನ್ನ ತಂದೆ ಮತ್ತು ನನ್ನ ಚಿಕ್ಕಮ್ಮ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. 2005 ರಲ್ಲಿ ಮಾರಾಟ ಮಾಡಿ 2005 ರಲ್ಲಿ ಒಂದು ಆಸ್ತಿ 2006 ಒಂದು ಆಸ್ತಿ ಖರೀದಿ ಮಾಡಿದ್ದಾರೆ. ನಮ್ಮ ಚಿಕ್ಕಮ್ಮನವರು ಏನು ತಕರಾರು ಹಾಕಿದ್ದಾರೆ ಎಂದು ಗೊತ್ತಿಲ್ಲ. ಅವರ ತಕರಾರಿನಲ್ಲಿ ಸದರಿ ಆಸ್ತಿಗಳನ್ನು ಸ್ವಂತವಾಗಿ ಖರೀದಿಸಿದ್ದೇನೆ ಎಂದು ಹೇಳಿದ್ದಾರೆ ಎಂದರೆ ಸರಿಯಲ್ಲ. ನನ್ನ ಚಿಕ್ಕಮ್ಮನ ಹೆಸರಿನಲ್ಲಿರುವ ಜಮೀನಿಗೆ ಕಂದಾಯವನ್ನು ನಾನು ಕಟ್ಟಿಲ್ಲ. ಸದರಿ ದಾವೆಯಲ್ಲಿ ವಾದಿ ಏನು ದಾಖಲೆಗಳನ್ನು ಹಾಜರು ಮಾಡಿದ್ದಾರೆ ಎಂದು ಗೊತ್ತಿಲ್ಲ. ವಾದಿ 3 ನೇ ಪ್ರತಿವಾದಿಯ ಹೆಸರಿನಲ್ಲಿರುವ ಮನೆಗೆ ಕಂದಾಯವನ್ನು ಕಟ್ಟಿಲ್ಲ. ನಾನು ಮತ್ತು ನನ್ನ ಅಕ್ಕ 3 ನೇ ಪ್ರತಿವಾದಿಯ ಹೆಸರಿಗೆ ಇರುವ ಮನೆಯಲ್ಲಿ ವಾಸವಿಲ್ಲ. ನನ್ನ ತಂದೆ ಅವರ ಜೀವಿತಾವಧಿಯಲ್ಲಿ ಯಾವಾಗಲು ಸರ್ಕಾರಿ ಹುದ್ದೆಯಲ್ಲಿ ಇರಲಿಲ್ಲ. ಅವರಿಗೆ ಸ್ವಂತ ಸಂಪಾದನೆ ಇಲ್ಲ ಎಂದರೆ ಬಾಡಿಗೆ

ಬರುತ್ತಿತ್ತು ಎನ್ನುತ್ತಾರೆ. ದಾವೆ ಹಾಕಿದಾಗಿನಿಂದ ದಾವಾ ಸರ್ವೆ ನಂಬರ್ ಆಸ್ತಿಗಳಲ್ಲಿ ಬೆಳೆಗಳು ಇವೆ. ಸರ್ವೆ ನಂ.54/4 ರಲ್ಲಿ ರಾಗಿ ಬೆಳೆ ಇಟ್ಟಿದ್ದೇವೆ. ಅದನ್ನು ವಾರಕ್ಕೆ ನಾನು ರೈತನಾದ ಪೈಲ್‌ಮಾನ್‌ಗೆ ಕೊಟ್ಟಿದ್ದೇನೆ. ನನ್ನ ತಂದೆಗೆ ಅಸ್ತಮ ಮತ್ತು ಬಿ.ಪಿ. ಕಾಯಿಲೆ ಇದೆ ಎಂದರೆ ನಿಜ. ಅವರಿಗೆ ಕಷ್ಟ ಪಟ್ಟು ಕೆಲಸ ಮಾಡಲು ಆಗುವುದಿಲ್ಲ ಎಂದರೆ ಗೊತ್ತಿಲ್ಲ. ನಾನು ಅವರ ಆಸ್ಪತ್ರೆ ಖರ್ಚನ್ನು ನೋಡುತ್ತಿಲ್ಲ ಎಂದರೆ ನಿಜ. ನನ್ನ ತಂದೆ ಬೆಂಗಳೂರಿನ ಒಂದು ಮನೆಯನ್ನು ಬಾಡಿಗೆಗೆ ಕೊಟ್ಟು ಅದರಿಂದ ಬರುವ ಬಾಡಿಗೆ ಹಣದಿಂದ ನನ್ನ ತಂದೆ ಜೀವನ ಮಾಡುತ್ತಿದ್ದಾರೆ ಎಂದರೆ ನಿಜ. ಅದೇ ರೀತಿ ನನ್ನ ಚಿಕ್ಕಮ್ಮ ಅವರು ಖರೀದಿಸಿದ ಆಸ್ತಿಯನ್ನು ಬಾಡಿಗೆ ಕೊಟ್ಟು ಬಾಡಿಗೆ ಹಣದಿಂದ ಜೀವನ ಮಾಡುತ್ತಿದ್ದಾರೆ ಎಂದರೆ ಗೊತ್ತಿಲ್ಲ. 3 ನೇ ಪ್ರತಿವಾದಿಯ ಬಾಡಿಗೆದಾರರು ನನಗೆ ಯಾವತ್ತೂ ಬಾಡಿಗೆ ಕೊಟ್ಟಿಲ್ಲ. ಐ.ಎ.ನಂ.3 ನ್ನು ನಾವು ರಿಸೀವರ್ ನೇಮಕ ಮಾಡಲು ಹಾಕಿದ್ದೇವೆ ಎಂದರೆ ನಿಜ. ನನ್ನ ತಂದೆಗೆ ಮತ್ತು ನನ್ನ ಚಿಕ್ಕಮ್ಮನಿಗೆ ಎಷ್ಟು ಬಾಡಿಗೆ ಬರುತ್ತದೆ ಎಂದು ನಾನು ನ್ಯಾಯಾಲಯಕ್ಕೆ ತಿಳಿಸಿಲ್ಲ. ಎಷ್ಟು ಬಾಡಿಗೆ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಬೆಂಗಳೂರಿನ ಆಸ್ತಿಗಳು ಅವರ ಸ್ವಯಾರ್ಜಿತ ಆಸ್ತಿಗಳು ಆದ ಕಾರಣ ಜಂಟಿ ಸ್ವಾಧೀನಕ್ಕೆ ತೆಗೆದುಕೊಳ್ಳಲು ಪ್ರಯತ್ನ ಪಟ್ಟಿಲ್ಲ ಎಂದರೆ ಸರಿಯಲ್ಲ. ಮಾರಾಟ ಮಾಡಿದ ಆಸ್ತಿಯ ಪ್ರತಿಫಲವನ್ನು ನಾನು ಹಂಚಿಕೊಂಡಿಲ್ಲ. ವಾದಿ, 6 ಮತ್ತು 7 ನೇ ಪ್ರತಿವಾದಿ ಅವರಿಗೆ ಬರಬೇಕಾದ ಭಾಗವನ್ನು ತೆಗೆದುಕೊಂಡು ರಾಜಿ ಮಾಡಿಕೊಂಡಿದ್ದಾರೆ ಎಂದರೆ ನಿಜ. ನಾನು ಮತ್ತು ನನ್ನ ತಂದೆ ನಮ್ಮ ಭಾಗದ ಪ್ರತಿಫಲವನ್ನು ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ಪಡೆದುಕೊಂಡಿಲ್ಲ ನನ್ನ ತಂದೆ ಪಡೆದುಕೊಂಡಿದ್ದಾರೆ. ನನ್ನ ಭಾಗದ ಹಣವನ್ನು ಪಡೆದುಕೊಂಡಿದ್ದೀರ ಎಂದು ನನ್ನ ತಂದೆಯನ್ನು ಕೇಳಿಲ್ಲ ಮತ್ತು ನೋಟೀಸ್ ಕೊಟ್ಟಿಲ್ಲ. ನಾನು ಮತ್ತು ನನ್ನ ತಂದೆ 4 ಆಸ್ತಿಯನ್ನು ಮಾರಾಟ ಮಾಡಿ ಅದರ ಪ್ರತಿಫಲವನ್ನು ನಾವು ಹಂಚಿಕೊಂಡಿದ್ದೇವೆ ಆದ ಕಾರಣ ಅದರಲ್ಲಿ ಭಾಗ ಕೊಡಿ ಎಂದು ಕೇಳಿಲ್ಲ ಎಂದರೆ ನಾನು ಪ್ರತಿಫಲವನ್ನು ತೆಗೆದುಕೊಂಡಿಲ್ಲ ಎನ್ನುತ್ತಾರೆ. ಅವರ ಭಾಗಕ್ಕೆ ಬಂದ ಹಣದಿಂದ ನನ್ನ ತಂದೆ ಐಟಂ ನಂ.1 ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಪೂರ್ತಿ ಹಣವನ್ನು ನನ್ನ ತಂದೆ ಪಡೆದುಕೊಂಡಿದ್ದಾರೆ ಎಂದು ನಾನು ದಾವೆಯಲ್ಲಿ ಹೇಳಿಲ್ಲ. ಪ್ರತಿವಾದ ಪತ್ರದ ಐಟಂ ನಂ.3 ಆಸ್ತಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾದ ಕಾರಣ ನನಗೆ ಭಾಗವಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಚಿಕ್ಕಮ್ಮನ ಆಸ್ತಿಯಲ್ಲಿ ನಮಗೆ ಯಾರಿಗೂ ಭಾಗವಿಲ್ಲ ಎಂದರೆ ಸರಿಯಲ್ಲ. ಜಮೀನು ಮಾರಿ ಬಂದ ಪ್ರತಿಫಲದಿಂದ ಪ್ರತಿವಾದ ಪತ್ರದ ಆಸ್ತಿಗಳನ್ನು ಖರೀದಿಸಿದ್ದೇವೆ ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ನೋಂದಾಯಿತ ಪತ್ರಗಳಲ್ಲಿ ಇದೆ ಎನ್ನುತ್ತಾರೆ. ನಾನು ಹಣ ಸಹಾಯ ಮಾಡಿದ ಬಗ್ಗೆ ದಾಖಲೆಗಳನ್ನು ಕೊಟ್ಟಿಲ್ಲ. ಮಾರಾಟದಿಂದ ಬಂದ ಹಣದಿಂದ

ಖರೀದಿ ಮಾಡಿದ್ದಾರೆ. ಪ್ರತಿವಾದ ಪತ್ರದಲ್ಲಿರುವ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ಜಂಟಿ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಒಡವೆ ವಸ್ತ್ರಗಳನ್ನು ಮಾರಿ ನನ್ನ ಚಿಕ್ಕಮ್ಮ ಆಸ್ತಿಗಳನ್ನು ಸ್ವಂತವಾಗಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾತ ನನ್ನ ತಂದೆಗೆ ಹಣ ಸಹಾಯ ಮಾಡಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಒ.ಎ. ಒಪ್ಪಿಕೊಂಡಿದ್ದಾರೆ,**

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**